# ದೇವತೆಗಳ ಆತ್ಮಸಾಕ್ಷಾತ್ಕಾರ

ಸ್ವಾಮಿ ರಾಘವೇಶಾನಂದ

*ಕೇನೋಪನಿಷತ್ತಿನಲ್ಲಿ ಬರುವ ಒಂದು ಕಥೆಯನ್ನು ಆಧರಿಸಿ ವೇದಾಂತತತ್ತ್ವದ ಮುಖ್ಯ ವಿಚಾರವನ್ನು ನಿರೂಪಿಸಿರುವ ಪೂಜ್ಯ ರಾಘವೇಶಾನಂದಜಿಯವರು ಬೆಂಗಳೂರಿನ ಅಲಸೂರಿನಲ್ಲಿರುವ ವಿವೇಕಾನಂದ ಆಶ್ರಮದ ಅಧ್ಯಕ್ಷರಾಗಿರುವರು.*

ಒಮ್ಮೆ ಒಬ್ಬ ಆಧ್ಯಾತ್ಮಿಕ ಪಿಪಾಸುವಿಗೆ ಒಂದು ಸಂದೇಹ ಬಂದಿತು. ಏನು ಆ ಸಂದೇಹ? ಅವನು ಶಾಸ್ತ್ರಗಳಿಂದಲೂ ಹಿರಿಯರಿಂದಲೂ ತಿಳಿದಿದ್ದ, "ಆತ್ಮವೊಂದೇ ಚೈತನ್ಯಸ್ವರೂಪವಾದದ್ದು. ಈ ಜಗತ್ತೆಲ್ಲಾ ಜಡಸ್ವರೂಪವಾದದ್ದು. ಜಗತ್ತಿಗೆ ಸೇರಿದ ಮನುಷ್ಯನ ದೇಹವೂ ಜಡಸ್ವರೂಪವಾದದ್ದು. ಅಂದರೆ ದೇಹದಲ್ಲಿರುವ ಮನಸ್ಸು, ಪ್ರಾಣ ಮುಂತಾದುವುಗಳೂ ಜಡ. ಅವು ಜಡಸ್ವರೂಪಗಳಾಗಿದ್ದರೆ, ತಮ್ಮೆಲ್ಲಾ ಕಾರ್ಯವನ್ನು ಯಾವ ಶಕ್ತಿಯ ಸಹಾಯದಿಂದ ನೆರವೇರಿಸುತ್ತಿವೆ?"

ತನ್ನ ಸಂದೇಹವನ್ನು ಬಗೆಹರಿಸಿಕೊಳ್ಳಲು, ಆಶ್ರಮದಲ್ಲಿ ವಾಸಿಸುತ್ತಿದ್ದ ಒಬ್ಬ ಹಿರಿಯ ಋಷಿಗಳನ್ನು ವಿಧಿವತ್ತಾಗಿ ಸಮೀಪಿಸಿ ನಮ್ರತೆಯಿಂದ ತನ್ನ ಪ್ರಶ್ನೆಯನ್ನು ಮುಂದಿಟ್ಟ.

> **ಪ್ರತಿಯೊಂದು ಬೋಧವೂ ಆತ್ಮಪ್ರಕಾಶ ಎಂದು ತಿಳಿದಾಗ ಆತ್ಮನನ್ನು ತಿಳಿದಂತಾಗುತ್ತದೆ.**
>
> —ಕೇನೋಪನಿಷತ್

ಶಿಷ್ಯ : "ಗುರುಗಳೇ, ಮನಸ್ಸು ಜಡವಸ್ತುವಾದುದರಿಂದ, ಯಾರ ಇಚ್ಛಾಶಕ್ತಿಯಿಂದ ಮನಸ್ಸು ಎಲ್ಲ ವಿಷಯಗಳನ್ನು ತಿಳಿಯುತ್ತದೆ ಹಾಗೆಯೇ ಪ್ರಾಣವಾಯು ತನ್ನ ಕೆಲಸದಲ್ಲಿ ತೊಡಗುವುದು, ಕಣ್ಣು ಹಾಗೂ ಕಿವಿಗಳು ನೋಡುವುದು ಹಾಗೂ ಕೇಳುವ ಕ್ರಿಯೆಯನ್ನು ಮಾಡುವುದು ಯಾವ ಶಕ್ತಿಯಿಂದ?"

ಗುರುವಿಗೆ ಶಿಷ್ಯನ ಸಂದೇಹ ಅರ್ಥವಾಯಿತು. ಇವೆಲ್ಲವೂ ಆತ್ಮನಿಂದ ಅಥವಾ ಚೈತನ್ಯದಿಂದ ಪ್ರೇರಿತವಾಗಿ ತಮ್ಮ ತಮ್ಮ ಕಾರ್ಯವನ್ನು ಮಾಡುತ್ತವೆ ಎಂದು ಅರ್ಥ ಮಾಡಿಸಬೇಕಾಗಿತ್ತು. ಆದರೆ ಬ್ರಹ್ಮ ಅಥವಾ ಆತ್ಮ ಎಂಬ ಪದವನ್ನು ಬಳಸಬೇಕಾದಾಗ ತುಂಬ ಹುಷಾರಾಗಿರಬೇಕು. ಕಾರಣ ಅದನ್ನು ಪದವಾಗಿ ಉಪಯೋಗಿಸಿದಾಗ ಅದೂ ಒಂದು ವಸ್ತುವಾಗಿ ಬಿಡುತ್ತದೆ. ವಸ್ತುವೆಂದರೇ ಜಡ. ಅಂದರೆ ಆತ್ಮವೂ ಜಡವಾಗಿ ಬಿಡುತ್ತದೆ. ಆದುದರಿಂದ ಅದನ್ನು ಅರ್ಥ ಮಾಡಿಸಲು ಗುರು ಸಂಜ್ಞಾರ್ಥಕವಾಗಿ ಉತ್ತರವೀಯುತ್ತಾನೆ.

ಗುರು ಹೇಳಿದರು: "ಶಿಷ್ಯ, ನಿನ್ನ ಸಂದೇಹ ಸಮಂಜಸವಾದುದು. ಆದರೆ ಗಮನವಿಟ್ಟು ಕೇಳಿ ನಾನು ಹೇಳುವುದನ್ನು ಅರ್ಥಮಾಡಿಕೊ." ಶಿಷ್ಯ ಉತ್ಸಾಹದಿಂದ ಮೈಯೆಲ್ಲಾ ಕಿವಿಮಾಡಿಕೊಂಡು ನೇರವಾಗಿ ಕುಳಿತು ಉತ್ತರಕ್ಕಾಗಿ ಕಾದ.

ಗುರುಗಳು: "ನೋಡಪ್ಪಾ, ಮಗು, ಯಾವುದರಿಂದ ಇವುಗಳು ಕೆಲಸ ಮಾಡಲು ಶಕ್ತಿಯನ್ನು ಪಡೆಯುತ್ತವೆಯೋ ಅದು ಕಿವಿಗೆ ಕಿವಿಯಾಗಿ, ಮನಸ್ಸಿಗೆ ಮನಸ್ಸಾಗಿ, ಮಾತಿಗೆ ಮಾತಾಗಿ, ಪ್ರಾಣಕ್ಕೆ ಪ್ರಾಣವಾಗಿ, ಕಣ್ಣಿಗೆ ಕಣ್ಣಾಗಿ ಅಂದರೆ ಇವೆಲ್ಲದರ ಹಿಂದೆ ಚೈತನ್ಯ ಸ್ವರೂಪವಾಗಿ, ಇವುಗಳನ್ನು ಪ್ರಕಾಶಗೊಳಿಸಿ, ಇವುಗಳಿಗೆ ಕೆಲಸ ಮಾಡುವ ಶಕ್ತಿಯನ್ನು ಕೊಡುತ್ತದೆ. ಅಷ್ಟು ಮಾತ್ರವಲ್ಲ, ವಿವೇಕಿಗಳು ಈ ಸತ್ಯವನ್ನು ಸರಿಯಾಗಿ ಸಾಕ್ಷಾತ್ಕಾರ ಮಾಡಿಕೊಂಡುಬಿಟ್ಟರೆ ಅವರೂ ಚೈತನ್ಯಸ್ವರೂಪರಾಗಿ ಬಿಡುತ್ತಾರೆ. ಮತ್ತೆ ಅವರಿಗೆ ಪುನರ್ಜನ್ಮವಿಲ್ಲ.

"ಅಷ್ಟುಮಾತ್ರವಲ್ಲ, ಇಂದ್ರಿಯಗಳ ಹಿಂದೆ ಇರುವ ಈ ಚೈತನ್ಯವನ್ನು ಕಣ್ಣಿನಿಂದ ನೋಡಲಾಗುವುದಿಲ್ಲ. ಮಾತಿನಿಂದ ತಿಳಿಯಲಾಗುವುದಿಲ್ಲ, ಮನಸ್ಸಿನಿಂದ ಕೂಡ ಅರಿಯಲಾಗುವುದಿಲ್ಲ. ಆದುದರಿಂದ ಈ ಬ್ರಹ್ಮಸ್ವರೂಪವನ್ನು ನೇರವಾಗಿ ಇದು ಇಂತಹದ್ದೇ ಎಂದು ನಿನಗೆ ತಿಳಿಸಿಕೊಡಲಾರೆವು. ಆ ಬ್ರಹ್ಮವು ನೀನು ಶಾಸ್ತ್ರದಿಂದ ಅದರ ಬಗ್ಗೆ ಏನು ತಿಳಿದಿದ್ದೀಯೊ ಅದಕ್ಕಿಂತ ಬೇರೆ. ಅದು ಜ್ಞೇಯವೂ ಅಲ್ಲ, ಅಜ್ಞೇಯವೂ ಅಲ್ಲ. ಇಂದ್ರಿಯಗಳಿಂದ ತಿಳಿಯಲಾಗದುದರಿಂದ ಅದು ಜ್ಞೇಯವಲ್ಲ. ನಿನ್ನ ಸ್ವರೂಪವೇ ಅದಾಗಿರುವುದರಿಂದ ಅದು ಅಜ್ಞೇಯವೂ ಅಲ್ಲ."

ಶಿಷ್ಯ ಶಾಸ್ತ್ರಗಳ ಸಹಾಯದಿಂದ ಬ್ರಹ್ಮದ ಸ್ವರೂಪದ ಬಗ್ಗೆ ಅದು ಏನು ಎನ್ನುವುದನ್ನು ತಿಳಿದಿದ್ದ. ಈಗ ಗುರುಗಳು ವಿವರಿಸಿದ ತಕ್ಷಣ ಅದರ ಸೂಕ್ಷ್ಮತ್ವವನ್ನೂ ಅರಿತ. ಆದುದರಿಂದ ಹೇಳಿದ: "ಗುರುಗಳೇ, ಬ್ರಹ್ಮದ ವಿಷಯವಾಗಿ ನಾನು ಎಲ್ಲವನ್ನೂ ಅರಿತಿದ್ದೇನೆ ಎಂದು ಹೇಳುವುದಿಲ್ಲ. ಅದೇ ಸಮಯದಲ್ಲಿ ಬ್ರಹ್ಮವನ್ನು ನಾನು ಅರಿತಿಲ್ಲ ಎಂದೂ ಹೇಳುವುದಿಲ್ಲ. ಬ್ರಹ್ಮ ಶಬ್ದದ ಅರ್ಥವೇ ಬೃಹತ್, ಅಂದರೆ ಅತಿ ದೊಡ್ಡದು ಎಂದು. ಬ್ರಹ್ಮನಿಗೆ ಮೇರೆ ಇಲ್ಲ. ಆದ್ದರಿಂದ

ಬ್ರಹ್ಮದ ಸ್ವರೂಪ ಎಂಥಾದ್ದು ಎಂದಾಗಲೀ, ಅದಕ್ಕೆ ಏನು ಅರಿವುಂಟು ಎಂದಾಗಲೀ ಹೇಳಲಾಗುವುದಿಲ್ಲ. ಅತಿ ಹೆಚ್ಚೆಂದರೆ ಬ್ರಹ್ಮವು ಇಂದ್ರಿಯಾತೀತ ಎಂದು ಹೇಳಬಹುದಷ್ಟೆ.

"ಬ್ರಹ್ಮವು ಅಜ್ಞೇಯವಸ್ತು ಎಂದು ಯಾರು ಅರಿವರೋ ಅವರಿಗೆ ಬ್ರಹ್ಮದ ಬಗ್ಗೆ ಸ್ವಲ್ಪ ಗೊತ್ತು. ಯಾರು ಬ್ರಹ್ಮವು ಜ್ಞೇಯವಸ್ತು ಎಂದು ತಿಳಿದಿರುವರೋ ಅವರಿಗೆ ಬ್ರಹ್ಮದ ಬಗ್ಗೆ ಏನೂ ಗೊತ್ತಿಲ್ಲ. ಇದು ಶ್ರುತಿಯ ಅಭಿಪ್ರಾಯ. ನಾನು ಶ್ರುತಿಯನ್ನು ಸರಿಯಾಗಿ ತಿಳಿದಿದ್ದೇನಷ್ಟೇ?" ಎಂದು ಶಿಷ್ಯ ಕೇಳಿದ.

ಗುರು ಹೇಳಿದರು: "ಬ್ರಹ್ಮಜ್ಞಾನಕ್ಕೆ ಮಾರ್ಗವೆಂದರೆ ಈ ಇಬ್ಬಗೆಯ ವಿರೋಧೋಕ್ತಿಗಳ ಸೂಚಿತಾರ್ಥವನ್ನು ತಿಳಿಯುವುದು. ಬ್ರಹ್ಮನು ಪ್ರತ್ಯಗಾತ್ಮನಂತೆ ಅಂದರೆ ಪ್ರತಿಯೊಬ್ಬನ ಬುದ್ಧಿಯಲ್ಲೂ ಅಂತರಾತ್ಮನಂತೆ ಪ್ರಕಾಶಗೊಳ್ಳುವನು. ಇದನ್ನು ಸಾಕ್ಷಾತ್ಕರಿಸಿಕೊಳ್ಳಲು ಮಾಡುವ ಪ್ರಯತ್ನವೇ ಮೋಕ್ಷಸಾಧನೆಯ ಮಾರ್ಗ. ನೋಡು, ಇದನ್ನು ನಮ್ಮ ಪೂರ್ವಿಕರು ಒಂದು ಕಥೆಯ ರೂಪದಲ್ಲಿ ಹೇಳಿದ್ದಾರೆ. ಆ ಕಥೆಯನ್ನು ಹೇಳುತ್ತೇನೆ, ಕೇಳು.

ಒಮ್ಮೆ ದೇವತೆಗಳಿಗೂ ರಾಕ್ಷಸರಿಗೂ ಒಂದು ಘೋರ ಯುದ್ಧ ನಡೆಯಿತು. ಆ ಘೋರ ಯುದ್ಧದಲ್ಲಿ ದೇವತೆಗಳು ಜಯವನ್ನು ಪಡೆದರು. ಪ್ರಪಂಚದಲ್ಲಿ ಬ್ರಹ್ಮ ಮಾತ್ರ ಚೈತನ್ಯ ವಸ್ತು. ಅದು ಬಿಟ್ಟು ಉಳಿದುದೆಲ್ಲಾ ಜಡ. ಅಂದರೆ ದೇವತೆಗಳು ಕಾರ್ಯಪ್ರವೃತ್ತರಾಗಲು ಬೇಕಾದ ಶಕ್ತಿ ಬಂದಿದ್ದುದು ಚೈತನ್ಯದಿಂದ. ಆದರೆ ದೇವತೆಗಳು ಒಬ್ಬೊಬ್ಬರೂ ನೆನೆದರು 'ನಮ್ಮ ಶಕ್ತಿಯಿಂದ ನಾವು ಯುದ್ಧದಲ್ಲಿ ಗೆದ್ದೆವು' ಎಂದು. ತಾವು ಚೈತನ್ಯಸ್ವರೂಪರೆಂಬುದನ್ನು ತಮ್ಮ ಅಹಂಕಾರದಿಂದ ಮರೆತು, ತಾವು ದೇಹಸ್ವರೂಪವೆಂಬ ಅಜ್ಞಾನದ ಭ್ರಾಂತಿಯಲ್ಲಿ ಮೆರೆದರು. ಒಂದು ಚಿಕ್ಕ ಉದಾಹರಣೆ ಕೊಡುವುದಾದರೆ ಚಂದ್ರ ತಾನು ಎರವಲು ಬೆಳಕಿನಿಂದ ಬೆಳಗುತ್ತಿದ್ದೇನೆಂಬುದನ್ನು ಮರೆತು, ತನ್ನ ಬೆಳಕಿನಿಂದ ಬೆಳದಿಂಗಳು ಹರಡುತ್ತಿದ್ದೇನೆಂದು ಹೆಮ್ಮೆಪಟ್ಟಂತೆ.

ಆ ನಿರ್ಗುಣ ನಿರಾಕಾರ ಬ್ರಹ್ಮ, ಸಗುಣ ಸಾಕಾರ ರೂಪ ತಾಳಿದಂತೆ ತೋರಿ, ಈ ದೇವತೆಗಳ ಅಜ್ಞಾನವನ್ನು ಹೋಗಲಾಡಿಸಲು ತೀರ್ಮಾನಿಸಿತು. ತಾನು ಒಬ್ಬ ದಿವ್ಯತೇಜಸ್ಸಿನ ಯಕ್ಷರೂಪವನ್ನು ಧರಿಸಿ, ದೇವತೆಗಳಿಗೆ ಕಾಣುವಂತೆ ದೂರದಲ್ಲಿ ನಿಂತು ಜ್ಯೋತಿರ್ಮಯವಾಗಿ ಪ್ರಕಾಶಗೊಳ್ಳಲು ಆರಂಭಿಸಿತು. ಇಂತಹ ಯಕ್ಷನನ್ನು ದೇವತೆಗಳು ಯಾರೂ, ಎಂದೂ ಕಂಡಿರಲಿಲ್ಲ. ಈ ಯಕ್ಷನು ಯಾರಿರಬಹುದೆಂದು ಇವರಿಗೆಲ್ಲಾ ಆಶ್ಚರ್ಯವಾಯಿತು. ಕಾರಣ ಅವರ ದೃಷ್ಟಿಯಲ್ಲಿ ಈ ಪ್ರಪಂಚದಲ್ಲಿ ಅವರಿಗೆ ತಿಳಿಯದೇ ಇರುವ ವಸ್ತುವೇ ಇಲ್ಲವೆಂಬ ಭಾವನೆ. ಆದ್ದರಿಂದ ಈ ಯಕ್ಷ ಯಾರೆಂದು ಕೂಲಂಕಷವಾಗಿ ತಿಳಿಯಲು ಇಚ್ಛೆಯಾಯಿತು. ಅವರು ದೇವತೆಗಳ ಪುರೋಹಿತನೂ ಸರ್ವಜ್ಞನೂ ಆದ ಅಗ್ನಿಯನ್ನು ಈ ಯಕ್ಷನು ಯಾರೆಂದು ಕಂಡುಹಿಡಿದು ಬರಬೇಕೆಂದು ಪ್ರಾರ್ಥಿಸಿದರು.

ಹಾಗೆಯೇ ಆಗಲೆಂದು ಅಗ್ನಿಯು ತನ್ನ ಶೌರ್ಯದ ಬಲದ ಅಹಂಕಾರದಿಂದ ಹಿಗ್ಗುತ್ತಾ ಆ ಯಕ್ಷನ ಬಳಿಗೆ ನಡೆದನು. ಅವನು ಯಕ್ಷನ ಬಳಿಗೆ ಬಂದಾಗ ಯಾವುದೋ ದಿಗ್ಭ್ರಮೆಗೊಳಗಾಗಿ ಅವನ ಬಾಯಿಂದ ಮಾತೇ ಹೊರಡಲಿಲ್ಲ. ಆಗ ಯಕ್ಷನೇ ಇವನನ್ನು "ನೀನು ಯಾರು?" ಎಂದು ಕೇಳಿದನು. ಅದಕ್ಕೆ ಅಗ್ನಿಯು "ನಾನು ಅಗ್ನಿ, ನನ್ನನ್ನು ಜಾತವೇದ ಎಂದು ಕೂಡ ಕರೆಯುತ್ತಾರೆ" ಎಂದನು. ಯಕ್ಷನಿಗೆ ತನ್ನ ಶೌರ್ಯದ ಪರಿಚಯ ಮಾಡಿಸಿಕೊಡಲು ತಾನು ಜಾತವೇದ ಎಂದು ಹೇಳಿದನು. ಜಾತವೇದ ಅಂದರೆ ಈ ಜಗತ್ತಿನಲ್ಲಿ ಸೃಷ್ಟಿಯಾಗಿರುವ ಎಲ್ಲ ಪದಾರ್ಥಗಳನ್ನೂ ನಾನು ಬಲ್ಲೆ ಎಂದು. ಅಷ್ಟೇ ಅಲ್ಲ, ಅದರ ಐಶ್ವರ್ಯವನ್ನೂ ಕರ್ಮಫಲವನ್ನೂ ಕೊಡುವವನು ಎಂದೂ ಹೇಳಬಹುದು. ಕಾರಣ ಅಗ್ನಿಯು ಯಜ್ಞಯಾಗಾದಿಗಳ ಸಮಯದಲ್ಲಿ ನಿವೇದಿಸಿದ ಹವಿಸ್ಸನ್ನು ದೇವತೆಗಳಿಗೆ ಕೊಂಡೊಯ್ದು ಅವರಿಗೆ ತಲುಪಿಸುತ್ತಾನೆ.

> ಆತ್ಮತತ್ತ್ವವನ್ನು ಇಲ್ಲಿಯೇ ಅರಿತುಕೊಂಡರೆ ಆಗ ಸತ್ಯವುಂಟು. ಇಲ್ಲಿ ಅರಿತುಕೊಳ್ಳದಿದ್ದರೆ ದೊಡ್ಡ ನಷ್ಟ.
>
> — ***ಕೇನೋಪನಿಷತ್.***

ಅವನ ಪರಿಚಯ ಮಾಡಿಕೊಂಡ ಯಕ್ಷನು, "ನಿನ್ನ ಹೆಸರೇನೋ ತಿಳಿಯಿತು. ಆದರೆ ನಿನ್ನಲ್ಲಿ ಏನು ಶಕ್ತಿ ಇದೆ? ಯಾವ ಕಾರ್ಯ ಸಾಧಿಸಬಲ್ಲೆ?" ಎಂದು ವಿಚಾರಿಸಿದನು.

ಅಗ್ನಿಗೆ ಒಳಗೊಳಗೇ ಅವಮಾನವಾಗುತ್ತಿದ್ದರೂ ಅದನ್ನು ತೋರ್ಗೊಡದೆ, "ಈ ಪ್ರಪಂಚದಲ್ಲಿ ನಾನು ಏನನ್ನು ಬೇಕಾದರೂ ಸುಟ್ಟು ಭಸ್ಮಮಾಡಬಲ್ಲೆ!" ಎಂದು ಅಹಂಕಾರದಿಂದ ಉತ್ತರವಿತ್ತನು. ದೇವತೆಗಳ ಅಹಂಕಾರವನ್ನು ನಾಶಮಾಡುವುದೇ ಯಕ್ಷನ ಉದ್ದೇಶವಾಗಿತ್ತು. ಆಗ ಯಕ್ಷನು ಅಗ್ನಿಯ ಮುಂದೆ ಒಂದು ಒಣಗಿದ ಹುಲ್ಲುಕಡ್ಡಿಯನ್ನು ಹಾಕಿ, "ಹಾಗಾದರೆ ಇದನ್ನು ಉರಿಸು ನೋಡೋಣ" ಎಂದನು. ಈ ಪ್ರಪಂಚವನ್ನೇ ಸುಡಬಲ್ಲ ಶಕ್ತಿಯುಳ್ಳ ಅಗ್ನಿಗೆ ಇದು ಎಂತಹ ಅವಮಾನದ ಪರಿಸ್ಥಿತಿ! ಕೇವಲ ಒಂದು ಒಣಗಿದ ಹುಲ್ಲುಕಡ್ಡಿಯನ್ನು ದಹಿಸಿ ತನ್ನ ಪರಾಕ್ರಮವನ್ನು ಪ್ರದರ್ಶಿಸಿಕೊಳ್ಳಬೇಕೆ? ಆದರೂ ಪಂದ್ಯವೆಂದರೆ ಮಾಡಲೇಬೇಕಲ್ಲಾ. ಅಸಡ್ಡೆಯಿಂದ ಮುಗುಳ್ನಗುತ್ತಾ ಮಕ್ಕಳ ಆಟದಂತೆ ಆ ಹುಲ್ಲನ್ನು ಭಸ್ಮಮಾಡಲು ಅದರತ್ತ ನೋಡಿದನು. ಆದರೆ ಅವನ ದೃಷ್ಟಿ

ಆ ಹುಲ್ಲುಕಡ್ಡಿಯ ಮೇಲೆ ಯಾವ ಪರಿಣಾಮವನ್ನೂ ಉಂಟು ಮಾಡಲಿಲ್ಲ. ಆದರೂ ಧೃತಿಗೆಡದೆ ಅದನ್ನು ದಹಿಸಲು ತನ್ನೆಲ್ಲಾ ಶಕ್ತಿಯನ್ನು ಉಪಯೋಗಿಸಿದನು. ಆದರೆ ಏನೂ ಪ್ರಯೋಜನ ವಾಗಲಿಲ್ಲ. ತನಗೆ ಉರಿಯುವ ಶಕ್ತಿಯನ್ನು ಕೊಡುವ ಭಗವಂತನೇ, ಯಕ್ಷನ ರೂಪದಲ್ಲಿ ತನ್ನ ಮುಂದೆ ನಿಂತಿದ್ದಾನೆ ಎನ್ನುವುದನ್ನು ತಿಳಿದುಕೊಳ್ಳುವ ಪ್ರಜ್ಞೆಯನ್ನೂ ಕಳೆದುಕೊಂಡಿದ್ದನು. ಕಾರಣ ಅಹಂಕಾರ ಅವನ ವಿವೇಕವನ್ನು ಮರೆಸಿತ್ತು. ಹತಾಶನಾಗಿ ಅವಮಾನದಿಂದ ತಲೆ ತಗ್ಗಿಸಿಕೊಂಡು, ದೇವತೆಗಳ ಬಳಿ ಹಿಂದಿರುಗಿ "ಆ ಯಕ್ಷ ಯಾರೆಂದು ನನಗೆ ಕಂಡುಹಿಡಿಯಲಾಗಲಿಲ್ಲ" ಎಂದನು.

ಅಗ್ನಿಯ ಮಾತನ್ನು ಕೇಳಿ ದೇವತೆಗಳಿಗೆಲ್ಲಾ ಆಶ್ಚರ್ಯ ವಾಯಿತು. ಅವರಿಗೆ ಆ ಯಕ್ಷನ ಬಗ್ಗೆ ತಿಳಿದುಕೊಳ್ಳಬೇಕೆಂಬ ಕುತೂಹಲ ಇನ್ನೂ ಜಾಸ್ತಿಯಾಯಿತು. ಅವರೆಲ್ಲಾ ವಾಯುವನ್ನು ಪ್ರಾರ್ಥಿಸಿಕೊಂಡರು. ವಾಯುದೇವತೆ "ನಾನು ಕಂಡು ಹಿಡಿದು ಬರುವೆನು" ಎಂದು ಯಕ್ಷನತ್ತ ಹೊರಟನು. ಅಗ್ನಿಗೆ ದಹಿಸುವ ಶಕ್ತಿ ಇದ್ದರೂ ಉರಿಯಲು ಸಹಾಯ ಮಾಡುವುದು ಗಾಳಿ. ಗಾಳಿಯಿಲ್ಲದೆ ಬೆಂಕಿ ಸುಡಲಾರದು, ಗಾಳಿಯಿದ್ದಷ್ಟೂ ಬೆಂಕಿಗೆ ದಹನಶಕ್ತಿ ಜಾಸ್ತಿ. ಆದುದರಿಂದ ಬೆಂಕಿ ಮಾಡಲಾಗದುದನ್ನು ಗಾಳಿ ಮಾಡುವನೆಂದು ದೇವತೆಗಳು ಭಾವಿಸಿದರು. ವಾಯುವು ಯಕ್ಷನ ಬಳಿಗೆ ಬಂದನು. ಯಕ್ಷನು, "ನೀನು ಯಾರಪ್ಪಾ!" ಅಂದನು. ಅದಕ್ಕೆ ಅವನು, "ನಾನು ವಾಯು, ನನ್ನನ್ನು ಜನರು ಮಾತರಿಶ್ವಾ" ಎಂದು ಕೂಡ ಕರೆಯುತ್ತಾರೆ ಎಂದನು. ಮಾತರಿಶ್ವಾ ಅಂದರೆ ನಾನು ಬರಿಯ ಭೂಮಿಯಲ್ಲಲ್ಲ, ಅಂತರಿಕ್ಷದಲ್ಲೂ ಚಲಿಸಬಲ್ಲೆ ಎನ್ನುವುದನ್ನು ಸೂಚಿಸಲು ಹಾಗೆ ಹೇಳಿದನು. ಅವನ ಪರಿಚಯದಿಂದ ತೃಪ್ತನಾಗಿ ಯಕ್ಷನು, "ಸರಿ, ನಿನ್ನ ಶಕ್ತಿ ಏನು?" ಎಂದನು. "ಈ ಭೂಮಿಯಲ್ಲಿ ಏನೇನಿದೆಯೋ ಅದೆಲ್ಲವನ್ನೂ ಎತ್ತಿ ಹಾರಿಸಬಲ್ಲೆ" ಎಂದನು. "ಸರಿ, ಹಾಗಾದರೆ ಈ ಹುಲ್ಲು ಕಡ್ಡಿಯನ್ನು ಎತ್ತಿ ತೋರಿಸು" ಎಂದನು ಯಕ್ಷ.

ವಾಯುವಿಗೆ ಆಶ್ಚರ್ಯವಾಯಿತು. ಇಂತಹ ಸಣ್ಣ ಹುಲ್ಲು ಕಡ್ಡಿಯನ್ನು ಎತ್ತುವುದರಿಂದ ಇವನು ನನ್ನ ಶಕ್ತಿಯನ್ನು ಅಳೆಯುವನೋ ಎಂದುಕೊಂಡನು. ಆದರೂ ನಿರ್ಲಕ್ಷ್ಯದಿಂದ ಆ ಹುಲ್ಲುಕಡ್ಡಿಯನ್ನು ಮೇಲೆತ್ತಲು ಪ್ರಯತ್ನಿಸಿದನು. ಆದರೆ ಅದು ಸ್ವಲ್ಪವೂ ಅಲುಗಾಡಲೇ ಇಲ್ಲ. ವಾಯುವು ಇಡೀ ಪ್ರಪಂಚವನ್ನೇ ಹಾರಿಸಬಲ್ಲವನಾದರೂ, ಒಂದು ಹುಲ್ಲುಕಡ್ಡಿಯನ್ನು ಚಲಿಸಲಾಗದವನಾದನು. ಆದರೂ ಬಿಡದೆ ಸರ್ವ ವೇಗದಿಂದ ಅದರ ಬಳಿಗೆ ಓಡಿ ಅದನ್ನು ಎತ್ತಲು ಯತ್ನಿಸಿದನು. ಅದು ಅಲುಗಾಡಲೂ ಇಲ್ಲ. ಅವನು ಅಲ್ಲಿಂದ ದೇವತೆಗಳಿದ್ದೆಡೆಗೆ ಹಿಂದಿರುಗಿ ಆ ಯಕ್ಷನು ಯಾರೆಂದು ನನ್ನಿಂದ ಸ್ವಲ್ಪವೂ ತಿಳಿಯಲಾಗಲಿಲ್ಲವೆಂದನು. ಕೊನೆಗೆ ಅವರೆಲ್ಲರೂ ತಮ್ಮ ರಾಜನಾದ ಇಂದ್ರನನ್ನು, "ತಾವೇ ಏನಾದರೂ ಮಾಡಿ ತಿಳಿದು ಬನ್ನಿ" ಎಂದು ಪ್ರಾರ್ಥಿಸಿದರು.

ಸರಿ, ಹಾಗೇ ಆಗಲಿ ಎಂದು ಆ ತೇಜಸ್ಸಿನಿಂದ ಹೊಳೆಯುತ್ತಿದ್ದ ಯಕ್ಷನು ಯಾರೆಂದು ತಿಳಿಯಲು ಯಕ್ಷನತ್ತ ಇಂದ್ರನು ಯಾತ್ರೆ ಹೊರಟನು. ಆದರೆ ಅಲ್ಲಿಗೆ ಹೋದಾಗ ಅವನಿಗೆ ಒಂದು ದೊಡ್ಡ ಆಶ್ಚರ್ಯ ಕಾದಿತ್ತು. ಅದೆಂದರೆ ಇಂದ್ರನು ಅಲ್ಲಿಗೆ ಬಂದಕೂಡಲೇ ಅಲ್ಲಿಂದ ಯಕ್ಷನು ಮಾಯವಾದನು.

ಆದರೆ ಇಂದ್ರನು ಸೋಲನ್ನೊಪ್ಪಿಕೊಂಡು ಹಿಂದಿರುಗಲು ಸಿದ್ಧನಾಗಿರಲಿಲ್ಲ. ಅವನು ಯಕ್ಷನು ಯಾರಿರಬಹುದೆಂದು ಏಕಮನಸ್ಸಿನಿಂದ ಧ್ಯಾನ ಮಾಡಲಾರಂಭಿಸಿದನು. ಆಗ ಯಾವ ಜಾಗದಲ್ಲಿ ಯಕ್ಷನು ಮಾಯವಾಗಿದ್ದನೋ ಆ ಸ್ಥಳದಲ್ಲಿಯೇ ಆಕಾಶದಲ್ಲಿ ಬಹು ಶೋಭಾಯಮಾನವಾಗಿ ಪ್ರಕಾಶಿಸುತ್ತಾ, ಜಗನ್ಮಾತೆ ಪ್ರತ್ಯಕ್ಷಳಾದಳು. ಇಂದ್ರನಿಗೆ ಯಕ್ಷನಲ್ಲಿದ್ದ ಭಕ್ತಿಯನ್ನು ನೋಡಿ, ಬ್ರಹ್ಮವಿದ್ಯೆಯು, ಜಗನ್ಮಾತೆಯಾದ ಉಮೆಯ ರೂಪದಲ್ಲಿ ದರ್ಶನ ನೀಡಿತು. ಅವಳ ಬರಿಯ ಸಾನ್ನಿಧ್ಯದಿಂದಲೇ ಅವನ ಮನಸ್ಸಿನಲ್ಲಿ ಹಿಂದೆಂದೂ ಅನುಭವಿಸದ ದಿವ್ಯಾನಂದದ ಅನುಭವವಾಯಿತು. ಅವನು ಅತ್ಯಂತ ನಮ್ರತೆಯಿಂದ, ಇಷ್ಟುಹೊತ್ತಿನವರೆಗೆ ದೃಷ್ಟಿಗೋಚರವಾಗಿದ್ದ ಆ ಯಕ್ಷನು ಯಾರೆಂದು ತಿಳಿಸಬೇಕೆಂದು ಪ್ರಾರ್ಥಿಸಿಕೊಂಡನು.

ಅವನ ವಿನಯದಿಂದ ಸುಪ್ರೀತಳಾದ ಉಮೆ, "ಅದು ಮತ್ತಾರೂ ಅಲ್ಲ, ಅದು ಸಾಕ್ಷಾತ್ ಬ್ರಹ್ಮ. ಯಾವುದರ ಸಹಾಯದಿಂದ, ಶಕ್ತಿಯಿಂದ ನೀವೆಲ್ಲ ರಾಕ್ಷಸರನ್ನು ಜಯಿಸಿದ್ದೀರೋ, ಯಾವುದು ಈ ಜಗತ್ತಿಗೆ ಕಾರಣವಸ್ತುವಾಗಿರುವುದೊ ಆ ನಿರ್ಗುಣ, ನಿರಾಕಾರ ಬ್ರಹ್ಮ, ಸಾಕಾರ ರೂಪ ತಾಳಿ ನಿಮ್ಮ ಮುಂದೆ ಜ್ವಲಿಸುತ್ತಿತ್ತು" ಎಂದಳು. ಜಗನ್ಮಾತೆಯು ಇಂದ್ರನ ಮೇಲೆ ಕೃಪೆಯಿಟ್ಟು, ಆ ಬ್ರಹ್ಮದ ಸ್ವರೂಪದ ಬಗ್ಗೆ ಇಂದ್ರನಿಗೆ ಉಪದೇಶಿಸಿದಳು. ಇಂದ್ರನು ಉಮೆಯ ಕೃಪೆಯಿಂದ ಬ್ರಹ್ಮಸಾಕ್ಷಾತ್ಕಾರ ಹೊಂದಿ ಪುನೀತನಾಗಿ, ಈ ಜಗತ್ತನಲ್ಲಿರುವ ಎಲ್ಲ ಶಕ್ತಿಯೂ ಬ್ರಹ್ಮಶಕ್ತಿಯೇ, ತಾವೆಲ್ಲ ಬರೀ ನಿಮಿತ್ತ ಮಾತ್ರ ಎಂಬುದನ್ನು ಅರಿತನು.

ಅವನು ಅಲ್ಲಿಂದ ಹಿಂದಿರುಗಿ ದೇವತೆಗಳಿಗೆ ನಡೆದುದೆಲ್ಲವನ್ನೂ ತಿಳಿಸಿದನು. ಪರೋಕ್ಷವಾಗಿ ಯಕ್ಷನ ರೂಪದಲ್ಲಿ ಬ್ರಹ್ಮದರ್ಶನವಾಗಿದ್ದುದರಿಂದಲೂ ಅಹಂಕಾರ ಅಡಗಿ, ನಮ್ರತೆ ಅವರ ಮನಸ್ಸಿನಲ್ಲಿ ತುಂಬಿದ್ದುದರಿಂದಲೂ ಇಂದ್ರನ ಸಹಾಯದಿಂದ ಅವರಿಗೂ ಬ್ರಹ್ಮ ಸಾಕ್ಷಾತ್ಕಾರವಾಯಿತು. ಅಗ್ನಿ, ವಾಯು, ಇಂದ್ರ ಈ ದೇವತೆಗಳು ಬ್ರಹ್ಮವನ್ನು ಅತಿ ಹತ್ತಿರದಿಂದ ದರ್ಶಿಸಿದುದರಿಂದಲೂ ಸಾಕ್ಷಾತ್ಕರಿಸಿಕೊಂಡಿದುದರಿಂದಲೂ ಅವರು ಇತರ ದೇವತೆಗಳಿಗಿಂತ ಶ್ರೇಷ್ಠರಾದರು. ಅದರಲ್ಲೂ ಇಂದ್ರನು ಅತ್ಯಂತ ಶ್ರೇಷ್ಠನಾದನು, ಕಾರಣ, ಜಗನ್ಮಾತೆಯಿಂದ ನೇರವಾಗಿ ಉಪದೇಶ ಪಡೆದು, ಮೊದಲು ಬ್ರಹ್ಮಸಾಕ್ಷಾತ್ಕಾರ ಪಡೆದುದರಿಂದ.

## ತಪಸ್ಸು, ದಮ ಮತ್ತು ಕರ್ಮ ಇವು ಬ್ರಹ್ಮವಿದ್ಯೆಗೆ ತಳಪಾಯ; ವೇದಗಳು ಅದರ ಅಂಗಗಳು; ಮತ್ತು ಸತ್ಯವು ಅದರ ಆಶ್ರಯ. —ಕೇನೋಪನಿಷತ್

ಇದರಿಂದ ಅರ್ಥವಾಗುವ ಮುಖ್ಯ ವಿಷಯವೆಂದರೆ, ಬ್ರಹ್ಮ ಸಾಕ್ಷಾತ್ಕಾರ ಪಡೆಯಲಿಚ್ಛಿಸುವ ಸಾಧಕನು, ತನ್ನ ಅಹಂಕಾರವನ್ನು ಸಂಪೂರ್ಣವಾಗಿ ತ್ಯಜಿಸಿ, ಬ್ರಹ್ಮವು ಎಲ್ಲ ಜೀವಿಗಳ ಅಂತರಾಳದಲ್ಲಿ ಸಚ್ಚಿದಾನಂದ ಸ್ವರೂಪನಾಗಿ ನೆಲೆಸಿರುವುದೆಂದು ಪೂರ್ಣಶ್ರದ್ಧೆಯಿಂದ ನಂಬಿ ಗುರುವಿನಿಂದ ಉಪದೇಶ ಪಡೆದು, ಶಾಸ್ತ್ರಾಧ್ಯಯನದಿಂದ ಆ ಉಪದೇಶದ ಸತ್ಯತೆಯನ್ನು ಖಚಿತಪಡಿಸಿಕೊಂಡು ತಪಸ್ಸು, ದಮ, ಕರ್ಮ ಮುಂತಾದ ಸಾಧನೆಗಳಿಂದ ಮನಸ್ಸನ್ನು ಶುದ್ಧಗೊಳಿಸಿಕೊಂಡು, ಆ ಬ್ರಹ್ಮವನ್ನು ತನ್ನ ಮನಸ್ಸಿನಲ್ಲಿ ಸಾಕ್ಷಾತ್ಕಾರಿಸಿಕೊಳ್ಳಲು ಯತ್ನಿಸಬೇಕು. ಬ್ರಹ್ಮಸಾಕ್ಷಾತ್ಕಾರವಾದರೆ ಸಾಧಕನು ಸಂಸಾರದಿಂದ ಬಿಡುಗಡೆ ಹೊಂದಿ ನಿರಂತರ ಆತ್ಮಾನಂದದಲ್ಲಿ ಮುಳುಗಿ, ತಾನು ಜೀವವಲ್ಲ, ಬ್ರಹ್ಮಸ್ವರೂಪ ಎಂಬ ಜ್ಞಾನವನ್ನು ಪಡೆಯುತ್ತಾನೆ.

(ಆಧಾರ : ಕೇನೋಪನಿಷತ್)

## ಪ್ರಹಸನ ಪ್ರಸಂಗ

**ಹ**ಳ್ಳಿಯಲ್ಲಿ ಒಂದು ಪಾಠಶಾಲೆ. ಅದು ಸರ್ಕಾರೀ ಶಾಲೆಯಾದ್ದರಿಂದ ಭಗ್ನಾವಸ್ಥೆಯಲ್ಲಿತ್ತು. ಉಪಾಧ್ಯಾಯರಿಗಾಗಲಿ, ವಿದ್ಯಾರ್ಥಿಗಳಿಗಾಗಲಿ ಪಾಠದಲ್ಲಿ ಆಸಕ್ತಿ ಇರಲಿಲ್ಲ. ಆಕಸ್ಮಿಕವಾಗಿ ಆ ಶಾಲೆಗೆ ಬೆಂಕಿ ಬಿತ್ತು. ವಿದ್ಯಾರ್ಥಿಗಳಿಗೆ ಸಂಭ್ರಮವೋ ಸಂಭ್ರಮ. ಎಲ್ಲರೂ ಅದು ಉರಿಯುತ್ತಿರುವುದನ್ನು ನೋಡಿ ಚಪ್ಪಾಳೆ ತಟ್ಟುತ್ತ, ಕುಣಿಯುತ್ತ ನಗತೊಡಗಿದರು.

ಊರಿನವರಿಗೆ ಇದನ್ನು ನೋಡಿ ಆಶ್ಚರ್ಯವಾಯಿತು. ಅವರು ವಿದ್ಯಾರ್ಥಿಗಳನ್ನು ವಿಚಾರಿಸಿದರು: "ಏನಪ್ಪ ಇದು! ಶಾಲೆ ಉರೀತಾ ಇದೆ, ನೀವು ಬೆಂಕಿ ಆರಿಸುವುದು ಬಿಟ್ಟು ನಗ್ತಾ ಇದ್ದೀರಲ್ಲಪ್ಪ?"

"ನಾಳೆಯಿಂದ ಕ್ಲಾಸ್ ಇಲ್ಲವಲ್ಲ, ಅದಕ್ಕೇ ಇಷ್ಟು ಸಂತೋಷ"—ವಿದ್ಯಾರ್ಥಿಗಳು ಹೇಳಿದರು.

ದೂರದಲ್ಲಿ ಒಬ್ಬ ವಿದ್ಯಾರ್ಥಿ ಮಾತ್ರ ಅಳುತ್ತ ನಿಂತುಕೊಂಡಿದ್ದ. ಒಬ್ಬನಾದರೂ ದುಃಖಪಡುವವನಿದ್ದಾನಲ್ಲ ಎಂದು ಜನರಿಗೆ ಸ್ವಲ್ಪ ಸಮಾಧಾನವಾಯಿತು. ಅವರಲ್ಲಿ ಒಬ್ಬರು ಹೋಗಿ ಆ ಹುಡುಗನನ್ನು ವಿಚಾರಿಸಿದರು: "ಏಕೊ ಮಗು ಅಳ್ತಾ ಇದ್ದೀಯ? ಏನಾಯ್ತಪ್ಪ? ಶಾಲೆ ಹೋಯ್ತಲ್ಲ ಎಂದು ದುಃಖಾನೆ?"

"ಇಲ್ಲ. ಉಪಾಧ್ಯಾಯರು ಹೊರಗಡೇನೇ ಊಳಕಂಡು ಬಿಟ್ಟಿದ್ದಾರೆ" ಎಂದು ಹೇಳುತ್ತ ಆತ ಮತ್ತೆ ಬಿಕ್ಕಿ ಬಿಕ್ಕಿ ಅಳತೊಡಗಿದ.

ಈ ವಿದ್ಯಾರ್ಥಿಗಳಂತೆ ನಮ್ಮ ಪ್ರಸ್ತುತ ಕಷ್ಟಗಳಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತೇವೆ. ಒಂದು ಕಷ್ಟ ತಪ್ಪಿದಾಗ ಸಂತೋಷಿಸುತ್ತೇವೆ. ಆದರೆ ಆ ಸಂತೋಷ ತಾತ್ಕಾಲಿಕ. ಆ ಕಷ್ಟ ಇನ್ನೂ ಭೂತಾಕಾರದಿಂದ ಮತ್ತೆ ಬರಬಹುದು. ನಾವು ಅನುಭವಿಸಬೇಕಾದುದನ್ನು ಅನುಭವಿಸಿಯೇ ತೀರಿಸಬೇಕಾಗುತ್ತದೆ. ಅದನ್ನು ಮುಂದೂಡುವುದರಿಂದ ಪ್ರಯೋಜನವಿಲ್ಲ. ನಾವು ಎದುರಿಸಬೇಕಾದ ಕಷ್ಟಗಳನ್ನು ವಾಸ್ತವದೃಷ್ಟಿಯಿಂದ ಸ್ವೀಕರಿಸುವ ಮಾನಸಿಕ ಪಕ್ವತೆಯನ್ನು ನಾವು ಹೊಂದಿರಬೇಕು.

❄❄❄❄

ಮೂವರು ಸ್ನೇಹಿತರು ಸ್ವರ್ಗದ ಬಾಗಿಲಿನಲ್ಲಿ ಬಂದು ನಿಂತರು. ದ್ವಾರಪಾಲಕನು ಅವರಿಗೆ ಒಂದು ಪ್ರಶ್ನೆಯನ್ನು ಕೇಳಿದನು: "ನಿಮ್ಮ ಶವಸಂಸ್ಕಾರದ ಸಮಯದಲ್ಲಿ ನಿಮ್ಮ ಸಂಬಂಧಿಕರು ಮತ್ತು ಸ್ನೇಹಿತರಿಂದ ಯಾವ ಪ್ರತಿಕ್ರಿಯೆಯನ್ನು ನೀವು ನಿರೀಕ್ಷಿಸುತ್ತೀರಿ?"

ಒಬ್ಬನು ಹೇಳಿದ: "ನಾನೊಬ್ಬ ಶ್ರೇಷ್ಠ ವೈದ್ಯನೆಂದೂ ಒಳ್ಳೆಯ ಗೃಹಸ್ಥನೆಂದೂ ಅವರು ಹೇಳಬೇಕೆಂದು ಬಯಸುತ್ತೇನೆ."

ಇನ್ನೊಬ್ಬನು ಹೇಳಿದ: "ನಾನೊಬ್ಬ ಉಪಾಧ್ಯಾಯನಾಗಿ ಹಲವರು ಉತ್ತಮ ಜೀವನ ನಡೆಸುವಂತೆ ಮಾಡಿದ್ದೇನೆ ಎಂದು ಅವರು ಮಾತನಾಡಿಕೊಳ್ಳುವುದನ್ನು ಕೇಳಬಯಸುತ್ತೇನೆ."

ಮೂರನೆಯವನು ಹೇಳಿದ: "ಆದರೆ ನನ್ನ ಬಯಕೆಯೇ ಬೇರೆ. 'ನೋಡಿ ನೋಡಿ, ಅವನು ಚಲಿಸುತ್ತಿದ್ದಾನೆ!' ಎಂದು ಅವರು ಹೇಳುವುದನ್ನು ಬಯಸುತ್ತೇನೆ."

ಎಲ್ಲರೂ ಜೀವಿಸುವುದನ್ನು ಬಯಸುತ್ತಾರೆ. ಆದರೆ ಸಾರ್ಥಕ ಜೀವನವನ್ನು ಬಯಸುವವರು ಕೆಲವರು ಮಾತ್ರ. ಸತ್ತ ವ್ಯಕ್ತಿಯೂ ಬದುಕಿಬರಲೆಂದು ಜನರು ಬಯಸುವಷ್ಟು, ಜನರ ಪ್ರೀತಿ ಗೌರವಗಳಿಗೆ ಪಾತ್ರರಾಗುವಂತೆ ನಾವು ಬಾಳಬೇಕು. "ಸದ್ಯ, ತೊಲಗಿದನಲ್ಲ" ಎನ್ನುವಂತಾಗಬಾರದು.

*